# ರಾಸಲೀಲೆ

## ಮನೋಗತ

ರಾಸಲೀಲೆಯೆಂದೊಡನೆ, ಶರದಋತುವಿನ ಹುಣ್ಣಿಮೆಯ ಬೆಳದಿಂಗಳ ರಾತ್ರಿಯಲ್ಲಿ ಶ್ರೀಕೃಷ್ಣನು ರಾಧಾ ಮತ್ತು ಗೋಪಿಯರೊಂದಿಗೆ ನಡೆಸಿದ ರಾಸೋತ್ಸವದ ನಯನಮನೋಹರ ದೃಶ್ಯವು ಕಣ್ಣೆದುರಿಗೆ ಬರುತ್ತದೆ. ಶ್ರೀಮದ್ಭಾಗವತ ಪುರಾಣದಲ್ಲಿ ಮಹರ್ಷಿ ವ್ಯಾಸರು ವರ್ಣಿಸಿದಂತೆ, ಆ ರಾತ್ರಿ ಈ ರಾಸೋತ್ಸವವು ಪ್ರಾರಂಭವಾಯಿತು ಮತ್ತು ಅದು ಬೆಳಗ್ಗಿನವರೆಗೆ ನಿರಂತರವಾಗಿ ನಡೆಯಿತು. ವಾಸ್ತವದಲ್ಲಿ ಸಾಕ್ಷಾತ್ ಭಗವಂತನೊಂದಿಗಿನ ಆ ರಾಸವು ಎಷ್ಟು ಅದ್ವಿತೀಯವಾಗಿರಬಹುದು ಎಂಬುದನ್ನು ಶಬ್ದಗಳಲ್ಲಿ ಮಂಡಿಸಲಾಗುವುದಿಲ್ಲ. ಗೋಪಿಯರ ಭಕ್ತಿಗೆ 'ಆದರ್ಶ ಭಕ್ತಿ' ಎಂಬ ಉಪಮೆಯನ್ನು ನೀಡಲಾಗುತ್ತದೆ. ಮೋಹಮಾಯೆಯಿಂದ ವಿರಕ್ತರಾಗಿರುವ ಗೋಪಿಯರ ಮತ್ತು ಭಗವಂತ ಶ್ರೀಕೃಷ್ಣನ ರಾಸಲೀಲೆಯು ಎಷ್ಟು ಪವಿತ್ರವಾಗಿರಬಹುದು !

ಹೀಗಿದ್ದರೂ ಕಲಿಯುಗದಲ್ಲಿ ರಾಸಲೀಲೆಯನ್ನು ಸಂದೇಹಾತ್ಮಕ ದೃಷ್ಟಿಯಿಂದ ನೋಡಲಾಗುತ್ತದೆ. ಇಷ್ಟೇ ಅಲ್ಲ, ಭಗವಂತನು ಗೋಪಿಯರೊಂದಿಗೆ ಮಾಡಿದ ರಾಸಕ್ರೀಡೆಯು ಕೆಲವರಿಗೆ ಅಧರ್ಮವೆನಿಸುತ್ತದೆ. ಯಾವನು ಈ ಮಾಯೆಯನ್ನು ನಿರ್ಮಿಸಿದನೋ, ಆ ಸಾಕ್ಷಾತ ಭಗವಂತನು ಹೀಗೆ ಮಾಡಬಹುದೇ ? ಇತ್ತೀಚೆಗೆ ರಂಗಪಂಚಮಿ, ಹಾಗೆಯೇ ನವರಾತ್ರ್ಯೋತ್ಸವಗಳಲ್ಲಿ ಗರಬಾಗಳನ್ನು ವಿಕೃತ ಸ್ವರೂಪದಲ್ಲಿ ಆಡಲಾಗುತ್ತದೆ ಮತ್ತು ಅವುಗಳಲ್ಲಿ ವ್ಯಭಿಚಾರವೂ ನಡೆಯುತ್ತದೆ. ರಾಸಲೀಲೆಯ ಭಾವಾರ್ಥವನ್ನು ತಿಳಿದುಕೊಳ್ಳದೇ, ಇಂದು ಅದರ ವಿಕೃತ ರೂಪವನ್ನು ತೋರಿಸುವುದರಿಂದ ಧಾರ್ಮಿಕ ಮೌಲ್ಯಗಳು ಲೋಪವಾಗುತ್ತಿವೆ.

ವಾಸ್ತವದಲ್ಲಿ ರಾಸಲೀಲಾರೂಪಿ ಭಗವಂತನ ಲೀಲೆಯೆಂದರೆ ಮಾಯೆಯಲ್ಲಿದ್ದು ಬ್ರಹ್ಮನನ್ನು ಅರಿತುಕೊಳ್ಳಲು ಕಲಿಸುವುದು. ಆದುದರಿಂದ ಮಾಯೆಯಲ್ಲಿಯೂ ಭಗವಂತನನ್ನು ಸ್ಮರಿಸಬೇಕು.

ಈ ಗ್ರಂಥದಲ್ಲಿ ರಾಸಲೀಲೆಯ ಭಾವಾರ್ಥ, ಮಧುರಾಭಕ್ತಿ ಹಾಗೂ ಅದರ ಸೂಕ್ಷ್ಮ ಅರ್ಥ ಮತ್ತು ಅದರ ಫಲಶ್ರುತಿ ಮುಂತಾದ ಮಾಹಿತಿಗಳನ್ನು ನೀಡಲಾಗಿದೆ. ಹಾಗೆಯೇ ರಾಸಲೀಲೆಯ ಬಗ್ಗೆ ಈಶ್ವರನ ಕೃಪೆಯಿಂದ ಸಾಧಕಿಯರಿಗೆ ದೊರಕಿದ ಅಮೂಲ್ಯ ಜ್ಞಾನದ ಆನಂದವನ್ನೂ ಪಡೆಯಬಹುದು. ರಾಸಲೀಲೆಯ ಬಗೆಗಿನ ತಪ್ಪುಕಲ್ಪನೆಗಳು ದೂರವಾಗಲು, ಅದನ್ನು ಅರ್ಥ ಮಾಡಿಕೊಳ್ಳಲು ಮತ್ತು ಅದರ ಆಧ್ಯಾತ್ಮಿಕ ಮಹತ್ವವನ್ನು ತಿಳಿದುಕೊಳ್ಳಲು ಈ ಗ್ರಂಥದಲ್ಲಿನ ಮಾಹಿತಿ ಮತ್ತು ಜ್ಞಾನದ ಉಪಯೋಗವಾಗಲೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !

- ಸಂಕಲನಕಾರರು


### ಕೃತಜ್ಞತೆ

ಈ ಗ್ರಂಥದಲ್ಲಿನ ಕೆಲವು ವಿಷಯಗಳನ್ನು ಪುಣೆ ಜಿಲ್ಲೆಯ ನಾರಾಯಣಗಾವ್‌ನ ಪ.ಪೂ. ಕಾಣೇ ಮಹಾರಾಜರು ಬರೆದಿರುವ ಜ್ಞಾನದಿಂದ ತೆಗೆದುಕೊಳ್ಳಲಾಗಿದೆ. ಈ ಜ್ಞಾನದ ಮೂಲಕ ನಮಗೆ ಅವರು ಮಾಡಿದ ಅಮೂಲ್ಯ ಮಾರ್ಗದರ್ಶನಕ್ಕಾಗಿ ನಾವು ಅವರಿಗೆ ಕೃತಜ್ಞರಾಗಿದ್ದೇವೆ.

# ಅನುಕ್ರಮಣಿಕೆ


卐 ಮನೋಗತ ೬

卐 ಗ್ರಂಥದ ಬಗ್ಗೆ ಸೂಕ್ಷ್ಮ ಜಗತ್ತಿನ ಓರ್ವ ವಿದ್ವಾಂಸರು ಮಾಡಿದ ಭಾಷ್ಯೆ ೭

卐 'ಸೂಕ್ಷ್ಮ' ಶಬ್ದಕ್ಕೆ ಸಂಬಂಧಿಸಿದ ಕೆಲವು ಸಂಜ್ಞೆಗಳ ಅರ್ಥ ೧೦

卐 ಸೂಕ್ಷ್ಮಜ್ಞಾನದ ಚಿತ್ರಕಾರ ಸಾಧಕಿಯ ಪರಿಚಯ ೧೦

卐 ಆಧ್ಯಾತ್ಮಿಕ ಸಂಜ್ಞೆಗಳ ಅರ್ಥ ೧೧

---

೧. ರಾಸ ಶಬ್ದದ ಉತ್ಪತ್ತಿ ಮತ್ತು ಅರ್ಥ ೧೨

೨. ಭಗವಂತನ ರಾಸಲೀಲೆಯ ವರ್ಣನೆಯಿರುವ ಶ್ರೀಮದ್ಭಾಗವತ ಪುರಾಣ ೧೨

೩. ರಾಸಲೀಲೆಯ ಹಿನ್ನೆಲೆ : ಗೋಪಿಯರ ಮಧುರಾಭಕ್ತಿ ೧೫

೩ ಅ. ಮಧುರಾಭಕ್ತಿಯ ಅರ್ಥ ೧೫

೩ ಆ. ಮಾಯೆಯಲ್ಲಿನ ಮಿಲನ ಮತ್ತು ಮಧುರಾಭಕ್ತಿಯಿಂದ ಸಾಧ್ಯವಾಗುವ ಅದ್ವೈತ ೧೫

೩ ಇ. ಮಹತ್ವ ೧೬

೩ ಈ. ಗೋಪಿಯರು ೧೬

೩ ಉ. ರಾಧಾ ೨೧

೩ ಊ. ಗೋಪಿಯರು ಮತ್ತು ರಾಧಾ ೩೦

೩ ಎ. ಸಂತ ಮೀರಾಬಾಯಿ ೩೧

೩ ಏ. ಮಧುರಾಭಕ್ತಿಯನ್ನು ಮಾಡುವ ಜೀವದ ಸಾಧನೆ ೩೫

೩ ಐ. ಹಂತಗಳು ೩೫

೩ ಒ. ಮಧುರಾಭಕ್ತಿಯನ್ನು ಮಾಡಿದ ಉದಾಹರಣೆಗಳು ೩೫

೪. ರಾಸಲೀಲೆಯ ಪ್ರಸಂಗ ೩೬

೫. ಮಹತ್ವ ೩೯

೬. ರಾಸಲೀಲೆಯನ್ನು ಅರಿತುಕೊಳ್ಳುವುದು ೪೦

೬ ಅ. ಬುದ್ಧಿಯಿಂದ ಅರ್ಥವಾಗುವ ಉತ್ತರಗಳು ೪೦

೬ ಆ. ರಾಸಲೀಲೆ ಯಾವಾಗ ಅರ್ಥವಾಗುತ್ತದೆ ? ೪೩

೬ ಇ. ದೇವತೆಗಳು ಮತ್ತು ರಾಸಲೀಲೆ ೪೫

೬ ಈ. ಶ್ರೀಕೃಷ್ಣನ ವೈಶಿಷ್ಟ್ಯಗಳು ೪೬

೬ ಉ. ರಾಸಲೀಲೆಯಿಂದ ಗೋಪಿಯರ ಮೇಲಾದ ಪರಿಣಾಮಗಳು ೪೭

೭. ಮಧುರಾಭಕ್ತಿ ಮತ್ತು ರಾಸಲೀಲೆಯ ಮಾಧ್ಯಮದಿಂದ ಗೋಪಿಯರ ಮೋಕ್ಷದ ವರೆಗಿನ ಮಾರ್ಗಕ್ರಮಣ ೫೦
೭ ಅ. ವಿವಿಧ ಮಟ್ಟದಲ್ಲಿ ಗೋಪಿಯರಲ್ಲಾದ ಉನ್ನತಿ ೫೦
೭ ಆ. ಶ್ರೀಕೃಷ್ಣನು ಸ್ವತಃ ಹಂತಹಂತವಾಗಿ ಗೋಪಿಯರನ್ನು ಜೀವದಶೆಯಿಂದ ಶಿವಾತ್ಮದಶೆಗೆ ಕೊಂಡೊಯ್ಯುವುದು ೫೨
೭ ಇ. ಶ್ರೀಕೃಷ್ಣನು ಗೋಪಿಯರನ್ನು ಸಗುಣದಿಂದ ನಿರ್ಗುಣದತ್ತ ಹಂತಹಂತವಾಗಿ ಒಯ್ಯುವುದು ೫೩
೭ ಈ. ಶ್ರೀಕೃಷ್ಣನು ರಾಸಲೀಲೆಯ ಮೂಲಕ ಪ್ರತಿಯೊಬ್ಬ ಗೋಪಿಯಲ್ಲಿ ಇಲ್ಲದಿರುವ ಗುಣಗಳನ್ನು ನಿರ್ಮಿಸಿ ಅವಳಿಗೆ ಅದ್ವೈತದ ಅನುಭೂತಿಯನ್ನು ಕೊಡುವ ಪ್ರಕ್ರಿಯೆ ೫೫
೭ ಉ. ಶ್ರೀಕೃಷ್ಣನು ಸಾಕ್ಷಾತ್ ಈಶ್ವರನಾಗಿದ್ದರಿಂದ ಅವನೊಡನೆ ಏಕರೂಪವಾದ ನಂತರ ಗೋಪಿಯರಿಗೆ ಸಾಯುಜ್ಯ ಮುಕ್ತಿಯ ಬದಲು ಮೋಕ್ಷ ಸಿಗುವುದು ೫೬
೮. ಶ್ರೀಕೃಷ್ಣನೊಂದಿಗೆ ಏಕರೂಪವಾಗುವಾಗ ಗೋಪಿಯರಿಗೆ ಬಂದ ಅನುಭೂತಿ ೫೬
೯. ರಾಸಲೀಲೆಯ ಭಾವಾರ್ಥ ೫೬
೧೦. ರಾಸಲೀಲೆಯ ಸಾರ ೫೭
೧೦ ಅ. ಉನ್ನತರಿಗೆ ಮತ್ತು ಋಷಿಗಳಿಗೆ ಸ್ವತಃ ರಾಸಲೀಲೆಯನ್ನು ಮಾಡಲು ಆಗದಿರುವುದರ ಕಾರಣಗಳು ೫೭
೧೦ ಆ. ಗೋಪಿಯರು ರಾಸಲೀಲೆಯನ್ನು ಮಾಡಲು ಸಾಧ್ಯವಾದುದರ ಕಾರಣಗಳು ೫೮
೧೦ ಇ. ಶ್ರೀಕೃಷ್ಣನಿಂದ ರಾಸಲೀಲೆಯನ್ನು ಮಾಡಲು ಸಾಧ್ಯವಾಗುವುದರ ಕಾರಣಗಳು ೫೮
೧೦ ಈ. ರಾಸಲೀಲೆಯನ್ನು ಯಾರು ಮಾಡಬಹುದು ? ೫೮
೧೧. ರಾಸಲೀಲೆ ಕುರಿತು ಶ್ರೀಕೃಷ್ಣನ ಬೋಧನೆ ೫೯
೧೨. ರಾಸಲೀಲೆಯ ಬಗ್ಗೆ ವಿಕಲ್ಪ ಬರುವುದೂ ಪಾಪ ೬೧
೧೩. ರಾಸನೃತ್ಯದ ವಿಧಗಳು ೬೧
೧೪. ಶ್ರೀಕೃಷ್ಣನ ಮೇಲಿನ ಪ್ರೇಮದಿಂದಾಗಿ ಸಾಧಕರಿಗೆ ಬಂದಂತಹ ಅನುಭೂತಿಗಳು ೬೨
೧೫. ಮಾಯಾವಿ ಮಾಂತ್ರಿಕರ ಮತ್ತು ಶ್ರೀಕೃಷ್ಣನ ರಾಸಲೀಲೆ ೭೧
೧೬. ಕ್ಷಾತ್ರಧರ್ಮ ಸಾಧನೆಯೂ ಒಂದು ರೀತಿಯಲ್ಲಿ ರಾಸಲೀಲೆ ! ೭೩